3.	How many to be provided:	15.09 lakhs sites already provided so far.
	with a declared annual income upto Rs.2000/-	7.53 Siteless persons are yet to be provided with sites.
4.	No. of cases pending in Courts.	Information is being collected from all the Deputy Commissioners.
5.	No. of cases to be disposed off by the Revenue Officer.	

ಹಿರಿಯೂರ್ ತಾಲ್ಲೂಕಿನ ವೇಣುಕಲ್ಲು ಗುಡ್ಡದ ಸಣ್ಣಮ್ಮ ಕೋಂ.ಟಿ. ಶಿವಲಿಂಗಪ್ಪ ಅವರ ಮನೆಯನ್ನು ಕಿತ್ತುಹಾಕಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ: ಹಿರಿಯೂರು ತಾಲ್ಲೂಕಿನ ವೆಣುಕಲ್ಲುಗುಡ್ಡದಲ್ಲಿ ಸಣ್ಣಮ್ಮ ಕೋಂ ಟಿ. ಶಿವಲಿಂಗಪ್ಪ ಇವರ ಹೆಸರಿನ ಗ್ರಾಮಠಾಣದಲ್ಲಿ ಕಟ್ಟಿದ ಖಾನ್ಸುಮಾರಿಯ ಸರ್ವೆ ನಂ.: 239ರಲ್ಲಿ ಕಟ್ಟಿಸಲಾದ ಮನೆಯನ್ನು ಪುಡಾರಿಗಳು ಕಿತ್ತುಹಾಕಿದ್ದು, 21-12-90ರಂದು ಪೊಲೀಸ್ ಇಲಾಖೆಗೆ ದೂರು ನೀಡಿದ್ದರೂ ಸಹ ಯಾವುಟೇ ಪ್ರಯೋಜನವಾಗಿರುವುದಿಲ್ಲ. ದಿನಾಂಕ: 13-1-91ರಂದು ಹಾಡುಹಗಲು ಪುಡಾರಿಗಳ ಗುಂಪೊಂದು ಮನೆ ಕಿತ್ತುಹಾಕಿದ ಬಗ್ಗೆ ಸರ್ಕಾರದಿಂದ ಸೂಕ್ತ ವಿವರಣೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ದಿನಾಂಕ: 13.1.1991ರಂದು ಶ್ರೀ ಲಿಂಗಪ್ಪ ತಂದೆ ತಿಮ್ಮಪ್ಪ ಮತ್ತು ಇತರೆ 35 ಜನರು ಅಕ್ರಮ ಕೂಟ ಸೇರಿಕೊಂಡು ಮಾರಕ ಶಸ್ತ್ರಾಸ್ತ್ರಗಳೊಂದಿಗೆ ಶ್ರೀ ಶಿವಲಿಂಗಪ್ಪರವರ ಮನೆಗೆ ಹೋಗಿದ್ದು ಆತನು ತನ್ನ ಕಾಂಪೌಂಡ್ ಗೋಡೆ ಮತ್ತು ಮನೆಯನ್ನು ಗ್ರಾಮದ ರಸ್ತೆಯಲ್ಲಿ ವತ್ತುವರಿ ಮಾಡಿ ಕಟ್ಟಿಕೊಂಡಿರುವರೆಂಬ ನೆಪ ಒಡ್ಡಿ ಆತನಿಗೆ ಭಯ ಪುಟ್ಟಿಸುವ ಬೆದರಿಕೆಯನ್ನು ಹಾಕಿದ್ದಲ್ಲದೆ,ಕಾಂಪೌಂಡ್ ಗೋಡೆ ಮತ್ತು ವತ್ತುವರಿ ಮಾಡಿದ ಮನೆಯ ಪ್ರವೇಶವನ್ನು ಕಿತ್ತುಹಾಕಿ ನಷ್ಟಗೊಳಿಸಿರುತ್ತಾರೆ. ಈ ಮೇರೆಗೆ ನೀಡಲಾದ ದೂರನ್ನು ಅನುಸರಿಸಿ ಅಬ್ಬಿನಹೊಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 2: 91 ಕಲಂ 143, 147, 148, 427, 307, 114 ರೆಡ್ ವಿಥ್ 149 ಐ.ಪಿ.ಸಿ.ಯ ಅಡಿಯಲ್ಲಿ ಮೊಕದ್ದಮೆ ನೋಂದಾಯಿಸಿಕೊಳ್ಳಲಾಗಿದೆ. ಈ ಸಂಬಂಧದಲ್ಲಿ ಈ ವರ್ಷ 36 ಜನರನ್ನು ಬಂಧಿಸಿ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ದಿನಾಂಕ:14-1-1991ರಂದು ಶ್ರೀ ಬಿ. ಶಿವಲಿಂಗಪ್ಪ, ಇವರ ಸಂಬಂಧಿಯೊಬ್ಬರು ದೂರೊಂದನ್ನು ಶ್ರೀ ಗುರುರಾಜಪ್ಪ ಮತ್ತು ಇತರ13 ಜನರಮೇಲೆ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದಲ್ಲದೆ ಸುಮಾರು 25,000-00 ರೂ. ತಂಬಾಕು ಬೆಳೆಯನ್ನು ನಾಶಗೊಳಿಸಿದ್ದರ ಬಗ್ಗೆ ನೀಡಿದ್ದು, ಈ ಮೇರೆಗೆ ಅಬ್ಬಿನ ಹೊಳೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 4: 91 ಕಲಂ 143, 147, 148, 443, 427, 506 ರೆಡ್ ವಿಥ್ 149 ಐ.ಪಿ.ಸಿ.ಯಡಿಯಲ್ಲಿ ಮೊಕದ್ದಮೆಯನ್ನು ನೋಂದಾಯಿಸಿಕೊಂಡು ತನಿಖೆ ನಡೆಸಲಾಗಿದೆ. ಈ 14 ಜನ ಆರೋಪಿತರಲ್ಲಿ 11 ಜನರನ್ನು ಬಂಧಿಸಿದ್ದು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ ಮತ್ತು 3 ಜನರು ತಲೆಮರೆಸಿಕೊಂಡಿರುತ್ತಾರೆ.

ಶ್ರೀ ಬಿ. ಶಿವಲಿಂಗಪ್ಪ, ತನ್ನ ಮನೆ ಮತ್ತು ಕಾಂಪೌಂಡ್ ಗೋಡೆಯನ್ನು ಗ್ರಾಮದ ರಸ್ತೆಗೆ ವತ್ತುವರಿ ಮಾಡಿದ್ದೇ ಈ ಘಟನೆಗೆ ಕಾರಣವಾಗಿದೆ ಮತ್ತು ಮಂಡಲ ಪ್ರಧಾನರು ಹಾಗೂ ಗ್ರಾಮಸ್ಥರನ್ನು ಪ್ರಚೋದಿಸಿರುತ್ತದೆ. ಮಂಡಲ ಪ್ರಧಾನರು ಶ್ರೀ ಬಿ. ಶಿವಲಿಂಗಪ್ಪರವರಿಗೆ ನೋಟೀಸನ್ನು ಕೊಟ್ಟಿದ್ದು ಆತನು ವತ್ತುವರಿ ಮಾಡಲಾದ ಪ್ರದೇಶವನ್ನು ತೆರವು ಮಾಡುವಂತೆ ತಿಳಿಸಿರುತ್ತಾರೆ. ಆದರೆ ಶ್ರೀ ಬಿ. ಶಿವಲಿಂಗಪ್ಪರವರು ವತ್ತುವರಿಯಾದ ಪ್ರದೇಶವನ್ನು ತೆರವು ಮಾಡುವುದರ ಬದಲು ನ್ಯಾಯಾಲಯದಿಂದ ಇಂಜೆಕ್ಷನ್ ಪಡೆದಿರುತ್ತಾರೆ. ಇದರಿಂದಾಗಿ ಗ್ರಾಮಸ್ಥರೆಲ್ಲರು ಉದ್ರೇಕಗೊಂಡಿರುತ್ತಾರೆ. ಈ ಹಿಂದೆ ಅಕ್ಟೋಬರ್ 1990ರಲ್ಲಿ ಈ ಗ್ರಾಮದಲ್ಲಿ 2 ಗುಂಪು ಘರ್ಷಣೆಗಳು ನಡೆದಿದ್ದು, ಈ ಎರಡೂ ಗುಂಪನ್ನು ಬಂಧಿಸಿ ತಾಲ್ಲೂಕು ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿರುತ್ತಾರೆ. ಈಗ ಅಲ್ಲಿ ತಾತ್ಕಾಲಿಕ ಔಟ್ ಪೋಸ್ಟ್ ಪೊಲೀಸ್ ಠಾಣೆಯನ್ನು ತೆರೆದಿದ್ದು ಈ ಎಲ್ಲಾ ಘಟನೆಗಳ ಬಗ್ಗೆ ನಿಗಾ ಇಡಲು ಕ್ರಮ ಕೈಗೊಳ್ಳಲಾಗಿದೆ.

6) ಬೆಂಗಳೂರಿನಲ್ಲಿ ಕಡಿಮೆ ಬೆಲೆಯ ಛಾಪಕಾಗದಗಳ ಅಭಾವ

ಶ್ರೀ ಡಿ.ಎ. ಚಿನ್ನಪ್ಪ: ಅಧ್ಯಕ್ಷರೇ, ಬೆಂಗಳೂರಿನಲ್ಲಿ ಕಡಿಮೆ ಬೆಲೆಯ ಛಾಪಾ ಕಾಗದಗಳು ಸಾರ್ವಜನಿಕರಿಗೆ ದೊರೆಯದಿದ್ದು 10 ರೂಪಾಯಿನ ಕಾಗದಕ್ಕೆ 15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ. ನಿಜಕ್ಕೂ ಛಾಪಾ ಕಾಗದಗಳ ಅಭಾವವಿದೆಯೇ, ಅಥವಾ ಕೃತಕ ಅಭಾವವನ್ನು ಉಂಟುಮಾಡಿ ಸಾರ್ವಜನಿಕರಿಂದ ಹೆಚ್ಚಿನ ಹಣ ವಸೂಲ್ಮಾಡುತ್ತಿದ್ದಾರೆಯೇ ಎನ್ನುವುದರ ಬಗ್ಗೆ ತನಿಖೆ ಮಾಡುವ ಅವಶ್ಯಕತೆ ಇದೆ. ಮತ್ತು ನಿಜಕ್ಕೂ ಅಭಾವವಿದ್ದಲ್ಲಿ ಸರ್ಕಾರದವರು ಕೂಡಲೇ ಕ್ರಮಕೈಗೊಂಡು ಅಭಾವವನ್ನು ನೀಗಿಸುವ ಜರೂರು ವ್ಯವಸ್ಥೆ ಮಾಡಬೇಕಾಗಿದೆ. ಸಾರ್ವಜನಿಕರ ಈ ತೊಂದರೆಯನ್ನುತಪ್ಪಿಸಲು ಮಾನ್ಯ ಕಂದಾಯ ಮಂತ್ರಿಗಳು ಈ ಸದನಕ್ಕೆ ಹೇಳಿಕೆ ನೀಡಿ ಏನು ಕ್ರಮ ಕೈಗೊಳ್ಳಲಿದ್ದಾರೆ ಎಂಬುದನ್ನು ತಿಳಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಂದಾಯ ಸಚಿವರ ಪರವಾಗಿ): ಅಧ್ಯಕ್ಷರೇ, ಕಡಿಮೆ ಬೆಲೆಯ ಮುದ್ರಾಂಕ ಕಾಗದಗಳ ಅಭಾವವು ಇರುವುದಿಲ್ಲ. ಸ್ಟಾಂಪ್ವೆಂಡರುಗಳು 10 ರೂಪಾಯಿ ಕಾಗದಕ್ಕೆ 15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಈ ರೀತಿ ಕೃತಕ ಅಭಾವ ಸೃಷ್ಟಿಸಿ ಹೆಚ್ಚು ಬೆಲೆಗೆ ಛಾಪಾ ಕಾಗದಗಳನ್ನು ಮಾರುತ್ತಿರುವುದು ಗಮನಕ್ಕೆ ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ತನಿಖೆ ನಡೆಸಿ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಅಲ್ಲದೆ ಬೆಂಗಳೂರು ನಗರದಲ್ಲಿ ಕಡಿಮೆ ಬೆಲೆಯ ಛಾಪಾ ಕಾಗದಗಳ ಅಭಾವವನ್ನು ತಪ್ಪಿಸಲು ಶಿವಾಜಿ ನಗರ ಮತ್ತು ಗಾಂಧಿನಗರ ಉಪನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಉಬ್ಬಚ್ಚುಯಂತ್ರಗಳನ್ನು (ಫ್ರಾಂಕಿಂಗ್ ಮೆಶಿನ್) ಸ್ಥಾಪಿಸಿದೆ. ಅಲ್ಲದೆ 10 ರೂಪಾಯಿಗಳಿಂದ 100ರೂಪಾಯಿಗಳ ಮೌಲ್ಯದವರೆಗೆ ಉಬ್ಬಚ್ಚು ಮಾಡುವ (ಎಂಬಾಸ್) ಹೆಚ್ಚುವರಿ ಯಂತ್ರಗಳನ್ನು ಸ್ಥಾಪಿಸಲು ಸರ್ಕಾರ ಈಗಾಗಲೇ ಅನುಮತಿ ನೀಡಿದೆ. ಆದುದರಿಂದ ಸಣ್ಣ ಮೌಲ್ಯದ ಛಾಪಾ ಪತ್ರಕ್ಕೆ ಬದಲಾಗಿ ಎಂಬಾಸ್ ಮಾಡಿದ ಪತ್ರಗಳನ್ನು ಉಪಯೋಗಿಸಬಹುದು. ಈ ಕ್ರಮದಿಂದ ಸಣ್ಣ ಮೌಲ್ಯದ ಛಾಪಾ ಕಾಗದದ ಅಭಾವ ಇರುವುದಿಲ್ಲ.